# ‘ಒಳ್ಳೆ ಪಾತ್ರಕ್ಕಾಗಿ ಎಷ್ಟಾದ್ರೂ ಕಾಯ್ತೀನಿ’

**ಗಾಂಧಿನಗರ ಪ್ರಣೀತ ಸೌಂದರ್ಯದ ಮಾನದಂಡಗಳ ಆಚೆ ಪ್ರತಿಭೆಯ ಮೂಲಕವೇ ಗುರ್ತಿಸಿಕೊಳ್ಳುತ್ತಿರುವ ನಟಿ ಅನುಪಮಾ ಗೌಡ. ಕಮರ್ಷಿಯಲ್ ಸಿನಿಮಾಗಳಲ್ಲಿ ನಟಿಸಬೇಕು ಎಂಬ ಇಂಗಿತ ಇರುವ ಅವರು ಉತ್ತಮ ಅವಕಾಶಕ್ಕಾಗಿ ಕಾಯುತ್ತಿದ್ದಾರೆ.**

■ ಪದ್ಮನಾಭ ಭಟ್



‘ನಂಗೆ ಸುಳ್ಳು ಹೇಳಿ ಅಭ್ಯಾಸ ಇಲ್ಲ. ಸತ್ಯಾನೇ ಹೇಳ್ತೀನಿ’ ಹೀಗೆ ಪ್ರಮಾಣ ಮಾಡಿಯೇ ಮಾತಿಗಾರಂಭಿಸಿದರು ಅನುಪಮಾ ಗೌಡ. ಈ ಪ್ರಮಾಣದ ಪ್ರಭಾವ ಅವರ ಮುಂದಿನ ಮಾತುಗಳಲ್ಲಿಯೂ ಎದ್ದುಕಾಣುತ್ತಿತ್ತು.

ಅನುಪಮಾ ಬಣ್ಣದ ಲೋಕಕ್ಕೆ ಅಡಿಯಿಟ್ಟಾಗ ಅವರಿಗಿನ್ನೂ 20 ವರ್ಷ. ಕಿರುತೆರೆ ಧಾರಾವಾಹಿಯ ಮೂಲಕ ನಟನೆ ಆರಂಭಿಸಿದ ಅವರು ನಂತರ ಬಿಗ್‌ಬಾಸ್ ರಿಯಾಲಿಟಿ ಷೋನಿಂದ ಸಾಕಷ್ಟು ಜನಪ್ರಿಯತೆ ಗಳಿಸಿದರು. ಬಿಗ್‌ಬಾಸ್ ಮನೆಯಲ್ಲಿಯೇ ಪರಿಚಯವಾದ ದಯಾಳ್ ಪದ್ಮನಾಭನ್ ತಮ್ಮ ‘ಆ ಕರಾಳ ರಾತ್ರಿ’ ಸಿನಿಮಾದಲ್ಲಿ ಅನುಪಮಾಗೆ ನಟನೆಯ ಅವಕಾಶ ಕೊಟ್ಟರು. ‘ಆ ಕರಾಳ ರಾತ್ರಿ’ ಅನುಪಮಾ ಗೌಡ ಅವರೊಳಗಿನ ನಟನಾಪ್ರತಿಭೆಯನ್ನು ಉಜ್ವಲವಾಗಿ ಬೆಳಗಿದ ಸಿನಿಮಾ.

‘ನಾನು ನಟನೆ ಆರಂಭಿಸಿ ಎಂಟು ವರ್ಷಗಳು ಕಳೆದುಹೋದವು. ನಟನೆ ಬಿಟ್ಟು ಬೇರೆ ಜಗತ್ತು ಗೊತ್ತಿಲ್ಲ ನನಗೆ. ಅದರ ಬಗ್ಗೆ ನನಗೆ ಯಾವ ಬೇಸರವೂ ಇಲ್ಲ. ಈಗಲೂ ಜನರು ನನ್ನ ಮೊದಲ ಧಾರಾವಾಹಿಯ ಪಾತ್ರವನ್ನು ನೆನಪಿಸಿಕೊಳ್ಳುತ್ತಾರೆ. ಅದಕ್ಕಿಂತ ಹೆಚ್ಚು ಇನ್ನೇನು ಬೇಕು ಹೇಳಿ?’ ಎಂದು ಸಾರ್ಥಕತೆಯ ನಗು ಚೆಲ್ಲುತ್ತಾರೆ ಅವರು.

ಹಾಗೆಂದು ಅನುಪಮಾ ಹೂವಿನ ಹಾದಿಯಲ್ಲಿಯೇ ನಡೆದವರಲ್ಲ. ಹೂವಿನ ಆಹ್ಲಾದದ ಜೊತೆಗೆ ಮುಳ್ಳಿನ ನೋವನ್ನೂ ಅವರು ಉಂಡವರು. ‘ನಾನು ಕೆರಿಯರ್ ಆರಂಭಿಸಿದ ಕಾಲದಲ್ಲಿ ಎಷ್ಟೋ ಸಲ ಏನೂ ಕೆಲಸ ಇಲ್ಲದೆ ಕೂತಿದ್ದೆ. ಆಗೆಲ್ಲ ಭಯ ಆಗುತ್ತಿತ್ತು. ಬದುಕು ಹೇಗೆ ನಡೆಸುವುದು ಎಂಬ ಚಿಂತೆಯಾಗುತ್ತಿತ್ತು. ಏನೇ ಹೇಳಿದರೂ ಜೀವನಕ್ಕೆ ದುಡಿಮೆ ಬೇಕಲ್ಲ. ಆದರೆ ಧಾರಾವಾಹಿ, ರಿಯಾಲಿಟಿ ಷೋ, ಕಾರ್ಯಕ್ರಮ ನಿರೂಪಣೆ, ಸಿನಿಮಾಗಳು ನನ್ನ ಬದುಕನ್ನು ರೂಪಿಸಿವೆ. ಇವುಗಳಿಂದ ನಾನು ಸಾಕಷ್ಟು ಕಲಿತಿದ್ದೇನೆ. ಅಂತರಂಗದ ಬದುಕಿನಲ್ಲೂ, ಬಾಹ್ಯಜೀವನದಲ್ಲಿಯೂ ಸಾಕಷ್ಟು ಸುಧಾರಿಸಿಕೊಂಡಿದ್ದೇನೆ. ಕೆಲಸವಿಲ್ಲದೇ ಆತಂಕದಿಂದ ಕೂತಿದ್ದವಳು, ಇರುವ ಕೆಲಸವನ್ನು ಬಿಟ್ಟು ಖಾಲಿ ಕೂತಿರುವುದೂ ಇದೆ. ಆಗಿರುವ ಆತಂಕ ಈಗ ಇಲ್ಲ. ಏನೋ ಒಂದು ದಾರಿ ಸಿಗುತ್ತದೆ ಎಂಬ ನಂಬಿಕೆ ಇದೆ’ ಎಂದು ವಿಶ್ವಾಸದಿಂದಲೇ ಹೇಳುತ್ತಾರೆ ಅನುಪಮಾ.

ಅನುಪಮಾ ನಟಿಸಿರುವ ಸಿನಿಮಾಗಳ ಸಂಖ್ಯೆಯೇನೂ ದೊಡ್ಡದಿಲ್ಲ. ಬಿಡುಗಡೆಯಾಗಿರುವ ಚಿತ್ರಗಳು ಎರಡು ಮಾತ್ರ. ಅವೆರಡೂ ದಯಾಳ್ ಪದ್ಮನಾಭನ್ ನಿರ್ದೇಶನದ ಸಿನಿಮಾಗಳೇ. ಬಿಗ್‌ಬಾಸ್ ಮನೆಯಿಂದ ಹೊರಗೆ ಬಂದಮೇಲೆ ಕಿರುತೆರೆ ವಾಹಿನಿಯ ಷೋ ಒಂದರ ನಿರೂಪಣೆಯ ಹೊಣೆಯನ್ನು ಅನುಪಮಾ ಹೊತ್ತಿದ್ದರು.

‘ನಾನು ಟೀವಿ ಷೋ ನಿರೂಪಣೆ ಮಾಡಲು ಶುರುಮಾಡಿದ ಮೇಲೆ ನನಗೆ ಸಿನಿಮಾ ಅವಕಾಶಗಳು ಬರುವುದು ನಿಂತು ಹೋದವು. ಸಿನಿಮಾದಲ್ಲಿ ನಟಿಸುವುದನ್ನು ನಿಲ್ಲಿಸಿ ಟೀವಿ ಷೋ ಮಾಡ್ತಿದ್ದಾಳೆ ಎಂದು ಎಲ್ಲರೂ ಅಂದುಕೊಂಡರು. ಹೀಗಾಗಿ ಕಳೆದ ಒಂದೂವರೆ ವರ್ಷದಿಂದ ನನಗೆ ಯಾವ ಸಿನಿಮಾದಲ್ಲಿಯೂ ನಟಿಸುವ ಅವಕಾಶ ಬರಲಿಲ್ಲ. ಇದೇ ಕಾರಣಕ್ಕೆ ಈಗ ಮೂರು ತಿಂಗಳಿಂದ ನಿರೂಪಣೆಯನ್ನು ನಾನು ನಿಲ್ಲಿಸಿದ್ದೇನೆ. ಸಿನಿಮಾದಲ್ಲಿ ಒಳ್ಳೆ ಅವಕಾಶಕ್ಕಾಗಿ ಕಾಯುತ್ತಿದ್ದೇನೆ’ ಎನ್ನುವ ಅನುಪಮಾ, ‘ಕೆಟ್ಟ ಸಿನಿಮಾಗಳಲ್ಲಿ ನಟಿಸುವುದಿಲ್ಲ. ಎಷ್ಟು ಕಾಯುವುದು ಬಂದರೂ ಪರವಾಗಿಲ್ಲ. ಒಳ್ಳೆಯ ಪಾತ್ರಗಳಲ್ಲಷ್ಟೇ ಕಾಣಿಸಿಕೊಳ್ಳುತ್ತೇನೆ’ ಎಂದು ಖಡಾಖಂಡಿತವಾಗಿ ಹೇಳುತ್ತಾರೆ.

ಕಿರುತೆರೆಯಲ್ಲಿ ನಟಿಸುತ್ತಿದ್ದ ಸಮಯದಲ್ಲಿ ಇವರಿಗೆ ‘ನಾನು ಸಿನಿಮಾಗೆಲ್ಲ ಫಿಟ್ ಅಲ್ಲ’ ಎಂಬ ಭಾವನೆ ಇತ್ತಂತೆ. ಆದರೆ ‘ಆ ಕರಾಳ ರಾತ್ರಿ’ ಸಿನಿಮಾದಲ್ಲಿ ನಟಿಸಿದ ನಂತರ ನಾನೂ ಸಿನಿಮಾದಲ್ಲಿ ನಟಿಸಬಹುದು ಎಂಬ ವಿಶ್ವಾಸ ಅವರಲ್ಲಿ ಮೂಡಿದೆ. ಪ್ರದೀಪ್ ವರ್ಮ ನಿರ್ದೇಶನದ ‘ದಿ ಫಾಲನ್’ ಸಿನಿಮಾದಲ್ಲಿ ಅನುಪಮಾ ಮುಖ್ಯ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ‘ಎಲ್ಲಕ್ಕಿಂತ ಮುಖ್ಯವಾಗಿ ನಾನೊಂದು ಕಮರ್ಷಿಯಲ್ ಸಿನಿಮಾದಲ್ಲಿ ನಟಿಸಬೇಕು’ ಎಂಬುದು ಅವರ ತುರ್ತಿನ ಇಂಗಿತ.

‘ಆ ಕರಾಳ ರಾತ್ರಿ’ ಸಿನಿಮಾ ನೋಡಿದವರು ನಾನು ಕಮರ್ಷಿಯಲ್ ಸಿನಿಮಾಗಳಿಗೆ ಫಿಟ್ ಅಲ್ಲ ಎಂದು ಹೇಳಿದರು. ಆದರೆ ಅದು ಸುಳ್ಳು ಎಂದು ಸಾಬೀತುಮಾಡಬೇಕಾಗಿದೆ. ಒಂದೊಮ್ಮೆ ಕಮರ್ಷಿಯಲ್ ಸಿನಿಮಾದಲ್ಲಿ ನಟಿಸಿ, ನಾನು ವಿಫಲಳಾದೆ ಅನಿಸಿದರೆ ಬಿಟ್ಟುಬಿಡುತ್ತೇನೆ’ ಎಂದು ದಿಟ್ಟವಾಗಿ ಹೇಳುವ ಅನುಪಮಾ ಗೌಡ ಮಾತುಗಳಲ್ಲಿ ನಟನೆಯ ಹಸಿವು ಎದ್ದು ಕಾಣುತ್ತದೆ.

ಚಿತ್ರ: ಅಭಿಷೇಕ್ ಎಸ್.ಎನ್.